ಆ) ದಿನಂಪ್ರತಿ ಕೇವಲ 1000 ಲೀಟರ್ ಹಾಳು ಮಾತ್ರ ಶೇಖರಣೆಯಾಗುತ್ತಿದ್ದರಿಂದ ಎಲ್ಲಾ 32 ಸಂಘಗಳು ಆರ್ಥಿಕವಾಗಿ ದುರ್ಬಲಗೊಂಡು ಸ್ಥಗಿತವಾಗಿರುತ್ತವೆ

ಇ) ಗುಲ್ಬರ್ಗಾ ಒಕ್ಕೂಟವು ರೈತರಿಂದ ಶೇಖರಿಸುವ ಪ್ರತಿ ಲೀಟರ್‌ಗೆ ರೂ 8 40 ಪೈಸೆ ರೈತರು ಒಂದು ಲೀಟರ್ ಹಾಲಿಗೆ ರೂ 4 00ರ ದರದಲ್ಲಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

486(855) ಶ್ರೀ ನಿಂಗಪ್ಪ ಹೆಚ್ (ಕುಣಿಗಲ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕುರಿಗಳಿಗೆ ಮತ್ತು ಜಾನುವಾರುಗಳಿಗೆ ತಗಲುವ ರೋಗಗಳನ್ನು ತಡೆಗಟ್ಟಲು ಇಲಾಖೆಯಿಂದ ತೆಗೆದುಕೊಂಡಿರುವ ಕ್ರಮಗಳೇನು

ಆ) ಅದರಲ್ಲೂ ಮುಖ್ಯವಾಗಿ ಕುಣಿಗಲ್ ತಾಲ್ಲೂಕಿಗೆ ಎಷ್ಟು ಜಾನುವಾರುಗಳು ಮತ್ತು ಕುರಿಗಳು ರೋಗದಿಂದ ಸತ್ತಿರುವ ಬಗ್ಗೆ ವರದಿಯಾಗಿದೆ (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು)

ಇ) ಇದಕ್ಕೆ ನೀಡಲಾಗಿರುವ ಮತ್ತು ನೀಡಲಿರುವ ಪರಿಹಾರವೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) 1 ರೋಗಗಳ ವಿರುದ್ಧ ಮುಂಜಾಗ್ರತಾ ಲಸಿಕೆ ಕಾರ್ಯಕ್ರಮ

2 ವಿಸ್ತರಣಾ ಚಟುವಟಿಕೆ

3 ಜಾನುವಾರು ಆರೋಗ್ಯ ಮತ್ತು ಬರಡು ರಾಸುಗಳ ಶಿಬಿರಗಳ ಏರ್ಪಾಡು

ಆ) ಪ್ರಸ್ತುತ ವರ್ಷದಲ್ಲಿ ಮೂರು ದನಗಳು ಸತ್ತಿರುತ್ತವೆ ತಾಲ್ಲೂಕುವಾರು ವಿವರ ಅನುಬಂಧದಲ್ಲಿ ನೀಡಿದೆ

ಇ) ಇಲಾಖೆಯಲ್ಲಿ ಪರಿಹಾರ ನೀಡಲು ಅವಕಾಶ ಕಲ್ಪಿಸಿರುವುದಿಲ್ಲ

488(857) ಶ್ರೀ ನಿಂಗಪ್ಪ ಹೆಚ್ (ಕುಣಿಗಲ್) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕುಣಿಗಲ್ ತಾಲ್ಲೂಕಿನ ಬ್ಯಾರಿತ ಕುರಿಗಳು ರೋಗಪೀಡಿತವಾಗಿ ಸಾವನ್ನಪ್ಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಈ ರೋಗವನ್ನು ತಡೆಗಟ್ಟಲು ಕೈಗೊಂಡಿರುವ ಮುಂಜಾಗ್ರತೆ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಇಲ್ಲ

ಕುಣಿಗಲ್ ತಾಲ್ಲೂಕಿನಲ್ಲಿ 2004–05ನೇ ಸಾಲಿನಲ್ಲಿ ಯಾವುದೇ ಕುರಿಗಳು ಮರಣ ಹೊಂದಿರುವುದಿಲ್ಲ

ಆ) ಮುಂಜಾಗ್ರತೆ ಕ್ರಮವಾಗಿ ಕುರಿಗಳಿಗೆ 15127 ಚುಚ್ಚುಮದ್ದನ್ನು ವಿವಿಧ ಕಾಯಿಲೆಗಳ ವಿರುದ್ಧ ಹಾಕಲಾಗಿದೆ

ಗಂಟಲು ಬೇನೆ	1661
ಪಿ ಪಿ ಆರ್	10806
ಕರುಳುಬೇನೆ	2560
ಕರುಸಿಡುಬು	100
ಒಟ್ಟು	15127